ಕರ್ನಾಟಕದಲ್ಲಿ ನೀರು ಸರಬರಾಜು ಯೋಜನೆ

೯೮೬. ಶ್ರೀ ಕೆ. ಬಿ. ಕೋಳಿವಾಡ (ರಾಣೆಬೆನ್ನೂರು).—ಮಾನ್ಯ ಗ್ರಾಮೀಣಾಭಿವೃದ್ಧಿ, ಪಂಚಾಯತ್‌ರಾಜ್ ಮತ್ತು ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೮೩ ರಿಂದ ೮೭ ರವರೆಗೆ ರಾಜ್ಯದಲ್ಲಿ ಕುಡಿಯುವ ನೀರಿನ ಸಲುವಾಗಿ ಕೊರೆದ ಕೊಳವೆ ಬಾವಿಗಳ ಸಣ್ಣ ನೀರು ಸರಬರಾಜು ಯೋಜನೆಗಳ ಹಾಗೂ ಕೈ ಪಂಪುಗಳಿಂದ ನೀರು ಸರಬರಾಜು ಮಾಡಲು ಕೈಗೊಂಡ ಯೋಜನೆ ಸಂಖ್ಯೆ ಎಷ್ಟು ?

ಆ) ಇವುಗಳಿಗಾದ ವೆಚ್ಚವೆಷ್ಟು ?

ಇ) ಇದಕ್ಕಾಗಿ ಕೇಂದ್ರ ಸರ್ಕಾರದಿಂದ ಬಂದ ಹಣವೆಷ್ಟು ? ಹಾಗೂ ರಾಜ್ಯ ಸರ್ಕಾರದ ಹಣ ವೆಷ್ಟು ?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣ ಅಭಿವೃದ್ಧಿ ಮತ್ತು ಪಂ.ರಾಜ್ ಸಚಿವರು).—

ಅ) ಇಸ್ವಿ	ಕೊರದ ಕೊಳವೆ ಬಾವಿಗಳ ಸಂಖ್ಯೆ	ಕಿರು ನೀರು ಸರಬರಾಜು ಯೋಜನೆಗಳ ಸಂಖ್ಯೆ	ನಳ ನೀರು ಸರಬರಾಜು ಯೋಜನೆಗಳ ಸಂಖ್ಯೆ
೧	೨	೩	೪
೧೯೮೩-೮೪	೧೭೬೮೨	—	೧೨೭
೧೯೮೪-೮೫	೧೫೭೧೯	—	೨೮೪
೧೯೮೫-೮೬	೧೦೯೪೫	೭೭೨	೧೦೪
೧೯೮೫-೮೭	೮೬೩೪	೯೭೮	೨೮೯
ಒಟ್ಟು	೫೨೮೮೦	೧೭೫೦	೧೧೦೪

ಅ) ೧೫೫.೭೫ ಲಕ್ಷ ರೂಪಾಯಿಗಳು.

ಇ) ಕೇಂದ್ರ ದಿಂದ ೪,೭೯೦.೫೦ ಲಕ್ಷ ರೂಪಾಯಿಗಳು,
ರಾಜ್ಯದಿಂದ ೫,೪೨೭.೭೬ ,,
ಬರಪರಿಹಾರ ೪,೯೨೧.೧೬ ,,

ಧಾರವಾಡ ಜಿಲ್ಲಾ ಪರಿಷತ್‌ಗೆ ಬಿಡುಗಡೆ ಮಾಡಿದ ಅನುದಾನ

೯೬೦. ಶ್ರೀ ಕೆ. ಬಿ. ಕೋಳಿವಾಡ (ರಾಣೆಬೆನ್ನೂರು),—ಮಾನ್ಯ ಗ್ರಾಮೀಣಾಭಿವೃದ್ಧಿ, ಪಂಚಾಯತ್ ಹಾಗೂ ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಧಾರವಾಡ ಜಿಲ್ಲಾ ಪರಿಷತ್‌ಗೆ ಈವರೆಗೆ ಬಿಡುಗಡೆ ಮಾಡಿದ ಒಟ್ಟು ಅನುದಾನದ ಹಣ ವೆಷ್ಟು ?

ಆ) ಅದರಲ್ಲಿ ಅಭಿವೃದ್ಧಿ ಕಾರ್ಯಗಳಿಗೆಷ್ಟು ವೆಚ್ಚ ಮಾಡಲಾಗಿದೆ ಮತ್ತು ಅಧ್ಯಕ್ಷರ ಉಪಾಧ್ಯಕ್ಷರ ಹಾಗೂ ಅಧಿಕಾರಿಗಳ ಪಗಾರ ಪ್ರವಾಸ ಭತ್ಯೆಗಳಿಗೆ ವೆಚ್ಚ ಮಾಡಿದ ಹಣವೆಷ್ಟು ?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

ಅ) ರೂ. ೫೩೨೩ ಲಕ್ಷಗಳು.